**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನ ಸಭೆ**

**ಹತ್ತನೇ ಅಧಿವೇಶನ**

# ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-26)**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ನ್ನು (2000ರ ಕರ್ನಾಟಕ ಅಧಿನಿಯಮ 17) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 15ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (2000ರ ಕರ್ನಾಟಕ ಅಧಿನಿಯಮ 17) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ, ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಪರಂತು, ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ರಿಜಿಸ್ಟ್ರಾರನ ಪೂರ್ವಾನುಮೋದನೆಯ ಹೊರತಾಗಿ, ಯಾವುದೇ ಸಹಕಾರಿಯು ಪೂರಕ ಸಂಸ್ಥೆಯಲ್ಲಿ ನಿಧಿಗಳನ್ನು ಪ್ರವರ್ತಿಸತಕ್ಕದ್ದಲ್ಲ ಅಥವಾ ಹೂಡತಕ್ಕದ್ದಲ್ಲ."

**3. 18ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದ (ಎ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸರ್ಕಾರದಿಂದ ಅನುಮೋದಿತವಾದ ಯಾವುದೇ ಭದ್ರತೆಗಳಲ್ಲಿ; ಅಥವಾ"

**4. 21ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 21ಎ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ಅಥವಾ ಸರ್ಕಾರದ ಅನುದಾನ ಹೊಂದಿಲ್ಲದ ಒಂದು ಮಾನ್ಯತೆ ಪಡೆದ ಸ್ವಸಹಾಯ ಗುಂಪು"

**5. 21ಬಿ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 21ಬಿ ಪ್ರಕರಣದಲ್ಲಿ (1)ನೇ ಉಪಪ್ರಕರಣದ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ನೌಕರರ ಸಹಕಾರಿಗಳ ಹೊರತಾಗಿ, ಸಹಸದಸ್ಯರ ಸಂಖ್ಯೆಯು ಒಟ್ಟು ಸದಸ್ಯರ ಶೇಕಡ ಹದಿನೈದನ್ನು ಮೀರತಕ್ಕದ್ದಲ್ಲ."

**6. 24ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 24ನೇ ಪ್ರಕರಣದಲ್ಲಿ,–

**(i)** "ಹನ್ನೊಂದಕ್ಕಿಂತ" ಎಂಬ ಪದಕ್ಕೆ "ಹದಿಮೂರಕ್ಕಿಂತ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**(ii)** (1)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1) ಪ್ರಾಥಮಿಕ ಸಹಕಾರಿಯ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು,–

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಡಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಇ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು:

ಪರಂತು, ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಪ್ರತಿಯೊಂದು ಸಹಕಾರಿಯ ಮಂಡಲಿಯಲ್ಲಿ ಅನುಸೂಚಿತ ಜಾತಿಗೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು ಮತ್ತು ಅನುಸೂಚಿತ ಪಂಗಡಕ್ಕೆ ಸೇರಿದ ಸದಸ್ಯನಿಗೆ ಒಂದು ಸ್ಥಾನವನ್ನು, ಮಹಿಳಾ ಸದಸ್ಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂತೆ ಹಿಂದುಳಿದ ವರ್ಗಗಳಿಗೆ ಸೇರಿದ ಸದಸ್ಯರಿಗೆ ಎರಡು ಸ್ಥಾನಗಳನ್ನು, ಅಂಥ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಅಂಥ ಸಹಕಾರಿಯ ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಸ್ಥಾನ ಬಲದಿಂದ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ:

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಅವಶ್ಯವಿದ್ದಲ್ಲಿ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು."

**7. 25ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 25ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಡಿ) ಸಂಯುಕ್ತ ಸಹಕಾರಿಯು ನೀಡಿದ ಆದೇಶ ಅಥವಾ ನಿರ್ದೇಶನ ಉಲ್ಲಂಘಿಸಿದರೆ ಅಥವಾ ಯಾವುದೇ ಅರೆ-ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದರೆ;

(ಇ) ಸಂಯುಕ್ತ ಸಹಕಾರಿಯ ಪೂರ್ವಾನುಮೋದನೆಯನ್ನು ಪಡೆಯದೆ ಶಾಖೆಗಳನ್ನು ತೆರೆದರೆ."

**8. 25ಎ ಹೊಸ ಪ್ರಕರಣದ ಸೇರ್ಪಡೆ.**- ಮೂಲ ಅಧಿನಿಯಮದ 25ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**25ಎ. ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ.**- (1) ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಆ ಪದಾಧಿಕಾರಿ ಪದವನ್ನು ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷಗಳ ತರುವಾಯ ಮಾತ್ರ ಮಂಡಿಸತಕ್ಕದ್ದು. ಒಂದು ವೇಳೆ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸತಕ್ಕದ್ದಲ್ಲ. ಸಂಬಂಧಪಟ್ಟ ಸಹಕಾರಿಯ ಮೂರನೇ ಒಂದರಷ್ಟು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಂದ ಕೋರಿಕೆ ಸಲ್ಲಿಕೆಯಾಗದಿದ್ದಲ್ಲಿ ಅಂಥ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.

(2) ಸಹಕಾರಿಯ ಪದಾಧಿಕಾರಿಯ ವಿಶ್ವಾಸವನ್ನು ಕೋರಿ ವ್ಯಕ್ತಪಡಿಸಿದ ನಿರ್ಣಯವನ್ನು ಸಹಕಾರಿಯು ಆ ಉದ್ದೇಶಕ್ಕಾಗಿ ನಡೆಸಿದ ವಿಶೇಷ ಸಭೆಯಲ್ಲಿ ಚುನಾಯಿತ ನಿರ್ದೇಶಕರ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಬಹುಮತದ ಮೂಲಕ ಅಂಗೀಕರಿಸಿದಲ್ಲಿ, ಆತನು ತನ್ನ ಪದವನ್ನು ತ್ಯಜಿಸಿದ್ದಾನೆಂದು ಭಾವಿಸತಕ್ಕದ್ದು.

(3) ಅವಿಶ್ವಾಸ ನಿರ್ಣಯಕ್ಕಾಗಿನ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು"

**9. 38ಬಿ ಹೊಸ ಪ್ರಕರಣದ ಸೇರ್ಪಡೆ.**- ಮೂಲ ಅಧಿನಿಯಮದ 38ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.-

"**38ಬಿ. ಪುಸ್ತಕಗಳನ್ನು ಮತ್ತು ಸ್ವತ್ತನ್ನು ವಶಪಡಿಸಿಕೊಳ್ಳುವ ಅಧಿಕಾರ.**- 33ನೇ ಪ್ರಕರಣದ ಅಡಿಯಲ್ಲಿ ಲೆಕ್ಕಪರಿಶೋಧನೆಯನ್ನು, 35ನೇ ಪ್ರಕರಣದ ಅಡಿಯಲ್ಲಿ ವಿಚಾರಣೆಯನ್ನು ಅಥವಾ ಪರಿವೀಕ್ಷಣೆಯನ್ನು ನಡೆಸುವ ಯಾವೊಬ್ಬ ಅಧಿಕಾರಿಗೆ ಅಥವಾ ವ್ಯಕ್ತಿಗೆ ಲೆಕ್ಕಪರಿಶೋಧನೆಯ, ವಿಚಾರಣೆಯ ಅಥವಾ ಪರಿವೀಕ್ಷಣೆಯ ಅವಧಿಯಲ್ಲಿ ತನ್ನ ಗಮನಕ್ಕೆ ಬಂದ ಯಾವುದೇ ನ್ಯೂನತೆ ಅಥವಾ ಅಕ್ರಮಗಳನ್ನು ರುಜುವಾತುಪಡಿಸುವುದಕ್ಕೆ ಸಂಬಂಧಿಸಿದಂತೆ ಅಗತ್ಯವೆಂದು ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ಭಾವಿಸಬಹುದಾದಂಥ ಯಾವುದೇ ಸಾಕ್ಷ್ಯವನ್ನು ನಾಶಪಡಿಸುವ ಅಥವಾ ಅಳಿಸುವ ಅಥವಾ ಬದಲಾಯಿಸುವ ಅಥವಾ ಕೈ ಚಳಕ ಮಾಡುವ ದೃಷ್ಟಿಯಿಂದ ಸಹಕಾರಿಯ ಯಾವುವೇ ಪುಸ್ತಕಗಳನ್ನು ಅಥವಾ ಇತರ ಸ್ವತ್ತುಗಳನ್ನು ಕೆಡಿಸಲಾಗಿದೆ ಎಂದು ಅಥವಾ ಅವುಗಳನ್ನು ಸಂಘದಲ್ಲಿ ಉಳಿಯಗೊಟ್ಟರೆ ಹಾಗೆ ಕೆಡಿಸುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ, ರಿಜಿಸ್ಟ್ರಾರನು ವಿಶೇಷ ಆದೇಶ ಹೊರಡಿಸುವ ಮೂಲಕ, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯವರೆಗೆ ಅಂಥ ಪುಸ್ತಕಗಳನ್ನು ಅಥವಾ ಸ್ವತ್ತನ್ನು ಜಪ್ತಿ ಮಾಡಲು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಂಥ ಅಧಿಕಾರಿಗೆ ಅಧಿಕಾರವನ್ನು ನೀಡತಕ್ಕದ್ದು."

**10. 48ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ "ತಾನಾಗಿಯೇ" ಎಂಬ ಪದದ ತರುವಾಯ "ಅಥವಾ ಸಂಯುಕ್ತ ಸಹಕಾರಿಯ ಶಿಫಾರಸ್ಸಿನ ಮೇರೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**11. 49ನೇ ಪ್ರಕರಣದ ತಿದ್ದುಪಡಿ.**- ಮೂಲ ಅಧಿನಿಯಮದ 49ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದಲ್ಲಿ "ಪ್ರತಿಯೊಬ್ಬ ಸಾಲಿಗನಿಗೆ ತಿಳಿಸತಕ್ಕದ್ದು." ಎಂಬ ಪದಗಳು ಮತ್ತು ಪೂರ್ಣ ವಿರಾಮಚಿಹ್ನೆಯ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಈ ರೀತಿ ನೇಮಕಗೊಂಡ ಸಮಾಪಕರು ಸಹಕಾರಿಯ ಪ್ರಭಾರ ವಹಿಸಿಕೊಂಡು ಆಸ್ತಿ ಜವಾಬ್ದಾರಿಗಳನ್ನು ಪಟ್ಟಿಮಾಡಿ ರಿಜಿಸ್ಟ್ರಾರನಿಂದ ಆದ್ಯತಾ ಪಟ್ಟಿಗೆ ಅನುಮೋದನೆಯನ್ನು ಪಡೆಯತಕ್ಕದ್ದು ಮತ್ತು ಅಂಥ ಅನುಮೋದನೆಯ ನಂತರವೇ ಸಮಾಪನಾ ಪ್ರಕ್ರಿಯೆಯನ್ನು ಆರಂಭಿಸತಕ್ಕದ್ದು."

**12. 52ಎ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 52ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"52ಎ. ಹೆಚ್ಚುವರಿ ನಿಧಿ, ಠೇವಣಿಗಳು ಮತ್ತು ಆಸ್ತಿಗಳ ವರ್ಗಾವಣೆ.–** ಸಮಾಪನಾ ಪ್ರಕ್ರಿಯೆ ಪೂರ್ಣಗೊಂಡ ತರುವಾಯ, ಸಹಕಾರಿಯಲ್ಲಿ ಹೆಚ್ಚುವರಿ ನಿಧಿಗಳು, ಠೇವಣಿಗಳು, ಚರ ಅಥವಾ ಸ್ಥಿರಾಸ್ತಿಗಳು ಉಳಿದಲ್ಲಿ, ಅಂಥ ನಿಧಿಗಳನ್ನು ಅಥವಾ ಆಸ್ತಿಗಳನ್ನು ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ನಿಧಿಗೆ ರಿಜಿಸ್ಟ್ರಾರನ ಅನುಮೋದನೆಯೊಂದಿಗೆ ವರ್ಗಾಯಿಸತಕ್ಕದ್ದು. ಅಂಥ ನಿಧಿಯ ಸ್ಥಾಪನೆ, ಅಭಿರಕ್ಷೆ, ವ್ಯವಸ್ಥಾಪನೆ ಮತ್ತು ಬಳಕೆಯ ವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು."

**13. 69ಎ ಹೊಸ ಪ್ರಕರಣದ ಸೇರ್ಪಡೆ:–** ಮೂಲ ಅಧಿನಿಯಮದ 69ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ.–

**"69ಎ. ಅಪರಾಧಗಳ ಕುರಿತು ದೂರು.–** ರಿಜಿಸ್ಟ್ರಾರನ ಅನುಮೋದನೆಯ ಹೊರತಾಗಿ 68ನೇ ಪ್ರಕರಣದ ಅಡಿಯಲ್ಲಿ ಯಾವುದೇ ದೂರನ್ನು ಹೂಡತಕ್ಕದ್ದಲ್ಲ:

ಪರಂತು, ಸಹಕಾರಿಯ ಲೆಕ್ಕಪರಿಶೋಧನೆಯ, ವಿಚಾರಣೆಯ ಅಥವಾ ಪರಿವೀಕ್ಷಣೆಯ ಅಥವಾ ಸಹಕಾರಿಯ ಸಾಮಾನ್ಯ ವ್ಯವಹಾರದಲ್ಲಿ ಪತ್ತೆಯಾದ ಸಹಕಾರಿಯ ನಿಧಿಗಳ ದುರುಪಯೋಗದ ಅಥವಾ ದುರ್ವಿನಿಯೋಗಗಳ ಆರೋಪಗಳ ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ದೂರುಗಳನ್ನು ದಾಖಲು ಮಾಡುವ ಮೊದಲು ರಿಜಿಸ್ಟ್ರಾರನಿಂದ ಅನುಮೋದನೆ ಪಡೆಯುವುದು ಅಗತ್ಯವಿರತಕ್ಕದ್ದಲ್ಲ.

**69ಬಿ. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ರಿಜಿಸ್ಟ್ರಾರನ ಅಥವಾ ಆತನ ಅಧೀನದಲ್ಲಿರುವ ಅಥವಾ ಆತನ ಪ್ರಾಧಿಕಾರದ ಮೇಲೆ ಕೆಲಸ ಮಾಡುವ ಯಾವೊಬ್ಬ ವ್ಯಕ್ತಿಯ ವಿರುದ್ಧ ಅಥವಾ ಸಹಕಾರ ಲೆಕ್ಕಪರಿಶೋಧನಾ ನಿರ್ದೇಶಕನ ಅಥವಾ ಆತನಿಂದ ಅಧಿಕೃತನಾಗಿ ಕಾರ್ಯನಿರ್ವಹಿಸುತ್ತಿರುವ ಇತರ ಯಾವೊಬ್ಬ ಅಧೀನ ಅಧಿಕಾರಿಯ ವಿರುದ್ಧ ಅಥವಾ ಸಹಕಾರಿಯ ಹೊಸ ಮಂಡಲಿಯ ವಿರುದ್ಧ ಅಥವಾ 38ನೇ ಪ್ರಕರಣದ ಅಡಿಯಲ್ಲಿ ನೇಮಿಸಲಾದ ಆಡಳಿತಗಾರನ ಅಥವಾ 38ಎ ಪ್ರಕರಣದ ಅಡಿಯಲ್ಲಿ ನೇಮಿಸಲಾದ ವಿಶೇಷಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 1997ನ್ನು(2000ರ ಕರ್ನಾಟಕ ಅಧಿನಿಯಮ 17) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಿದೆ, ಎಂದರೆ:-

(i) ಸಹಸದಸ್ಯರ ಸಂಖ್ಯೆಯನ್ನು ಈಗಿನ ಶೇಕಡಾ 10ರಿಂದ ಶೇಕಡಾ 15ಕ್ಕೆ ಹೆಚ್ಚಿಸುವುದು;

(ii) ಸೌಹಾರ್ದ ಸಹಕಾರಿ ವ್ಯವಸ್ಥಾಪನೆಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಸದಸ್ಯರಿಗೆ ಪ್ರತ್ಯೇಕ ಮೀಸಲಾತಿಯನ್ನು ಕಲ್ಪಿಸುವುದು;

(iii) ಸೌಹಾರ್ದ ಸಹಕಾರಿಗಳಲ್ಲಿ ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ಉಪಬಂಧಗಳನ್ನು ಕಲ್ಪಿಸುವುದು;

(iv) ಲೆಕ್ಕ ಪರಿಶೋಧನೆ, ವಿಚಾರಣೆ ಅಥವಾ ಪರಿವೀಕ್ಷಣೆಯನ್ನು ಮಾಡುವ ಅಧಿಕಾರಿಗೆ, ಪುಸ್ತಕಗಳನ್ನು ಮತ್ತು ಸ್ವತ್ತುಗಳನ್ನು ಜಫ್ತಿಮಾಡುವ ಅಧಿಕಾರವನ್ನು ನೀಡಲು ಉಪಬಂಧಗಳನ್ನು ಕಲ್ಪಿಸುವುದು;

(v) ಸಮಾಪನೆಯ ನಂತರ ಹೆಚ್ಚುವರಿ ನಿಧಿಗಳನ್ನು ಸೌಹಾರ್ದ ಸಹಕಾರಿ ಅಭಿವೃದ್ಧಿ ನಿಧಿಗೆ ವರ್ಗಾಯಿಸುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತ ಜ್ಞಾಪನ ಪತ್ರ

| | |
|---|---|
| ಖಂಡ – 2 | 15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಸೇರಿಸಲು ಉದ್ದೇಶಿಸಿರುವ ಪರಂತುಕವು, ರಿಜಿಸ್ಟ್ರಾರನ ಪೂರ್ವಾನುಮೋದನೆಯೊಂದಿಗೆ ಯಾವುದಕ್ಕೆ ಒಳಪಟ್ಟು ಸಹಕಾರಿಯು, ಪೂರಕ ಸಂಸ್ಥೆಯಲ್ಲಿ ನಿಧಿಯನ್ನು ಪ್ರವರ್ತಿಸತಕ್ಕದ್ದು ಅಥವಾ ಹೂಡತಕ್ಕದ್ದು ಎಂಬುದನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ – 8 | ಸೇರಿಸಲು ಉದ್ದೇಶಿಸಿರುವ 25ಎ ಪ್ರಕರಣವು ಅವಿಶ್ವಾಸ ನಿರ್ಣಯದ ಕಾರ್ಯವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ – 9 | ಸೇರಿಸಲು ಉದ್ದೇಶಿಸಿರುವ 38ಬಿ ಪ್ರಕರಣವು ಸಹಕಾರಿಯ ಪುಸ್ತಕಗಳು ಅಥವಾ ಸ್ವತ್ತನ್ನು ಜಪ್ತಿಮಾಡುವ ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾರ್ಯವಿಧಾನ ಮತ್ತು ಅವಧಿಯನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ – 12 | ಸೇರಿಸಲು ಉದ್ದೇಶಿಸಿರುವ 52ಎ ಪ್ರಕರಣವು ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ನಿಧಿಯ ಸ್ಥಾಪನೆ, ಅಭಿರಕ್ಷೆ, ವ್ಯವಸ್ಥಾಪನೆ ಮತ್ತು ಬಳಕೆಯ ವಿಧಾನವನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಹೆಚ್. ಎಸ್. ಮಹದೇವ ಪ್ರಸಾದ್**
ಸಹಕಾರ ಮತ್ತು ಸಕ್ಕರೆ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ (2000ರ ಕರ್ನಾಟಕ ಅಧಿನಿಯಮ ಸಂಖ್ಯೆ 17) ಉದ್ಧೃತ ಭಾಗ

**XXX XXX XXX**

**15. ಪೂರಕ ಸಂಸ್ಥೆಗಳ ಪ್ರಾರಂಭ.**- (1) ಯಾವುದೇ ಸಹಕಾರಿಯು, ಅದರ ಸಾಮಾನ್ಯ ಸಭೆಯಲ್ಲಿ ಮತ ನೀಡಲು ಹಕ್ಕುಳ್ಳ ಸದಸ್ಯರ ಬಹುಮತದಿಂದ ಅಂಗೀಕರಿಸಿದ ನಿರ್ಣಯದ ಮೂಲಕ, ಅದರ ಉದ್ದೇಶಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಒಂದು ಅಥವಾ ಹೆಚ್ಚು ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಬಹುದು ಮತ್ತು ಅಂಥ ಪ್ರತಿಯೊಂದು ಸಂಸ್ಥೆಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ನೋಂದಾಯಿಸಬಹುದು.

ಪರಂತು, ರಿಸರ್ವ್ ಬ್ಯಾಂಕಿನ ಲಿಖಿತ ಪೂರ್ವಾನುಮತಿ ಇಲ್ಲದೆ ಒಂದು ಸಹಕಾರಿ ಬ್ಯಾಂಕ್ ಅಥವಾ ಒಂದು ಸಹಕಾರಿಯು ಬ್ಯಾಂಕಿಂಗ್ ವ್ಯವಹಾರ ನಡೆಸುವುದಕ್ಕೆ ಅದರ ಉಪವಿಧಿಗಳು ಅವಕಾಶ ಕಲ್ಪಿಸುವಂತಹ ಒಂದು ಪೂರಕ ಸಂಸ್ಥೆಯನ್ನು ಪ್ರವರ್ತಿಸತಕ್ಕದ್ದಲ್ಲ.

**XXX XXX XXX**

**18. ನಿಧಿಗಳ ಹೂಡಿಕೆ.**- ಸಹಕಾರಿಯ ತಕ್ಷಣದ ಬಳಕೆಗೆ ಅಗತ್ಯವಾಗಿರದಂಥ ನಿಧಿಗಳನ್ನು ಅದರ ವ್ಯವಹಾರದ ಹೊರತು ಬೇರೆಡೆಯಲ್ಲಿ, ಎಂದರೆ,-

(ಎ) ನ್ಯಾಸ ಅಧಿನಿಯಮ, 1882ರ (1882ರ ಕೇಂದ್ರಾಧಿನಿಯಮ II) 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಭದ್ರತೆಗಳಲ್ಲಿ; ಅಥವಾ

**XXX XXX XXX**

**21ಎ. ನಾಮ ಮಾತ್ರ ಸದಸ್ಯರು,**-(1) ಒಂದು ಸಹಕಾರಿಯು ಅದರ ಹಿತಾಸಕ್ತಿಯಲ್ಲಿ-

(ಎ) ಯಾವೊಬ್ಬ ವ್ಯಕ್ತಿಯನ್ನು,

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

- ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ, ಮೂರು ವರ್ಷಗಳಿಗೆ ಮೀರದ ಅವಧಿಗಾಗಿ ನಾಮಮಾತ್ರ ಸದಸ್ಯ ಎಂದು ಸೇರಿಸಿಕೊಳ್ಳಬಹುದು;

**XXX XXX XXX**

**21ಬಿ.- ಸಹ ಸದಸ್ಯತ್ವ:**- (1) ಒಂದು ಸಹಕಾರಿಯು,- **XX XX XX**

(ಬಿ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ಯಾವುದೇ ಫರ್ಮು, ಕಂಪನಿ, ಸಹಕಾರ ಸಂಘ, ಸಹಕಾರಿ ಅಥವಾ ಯಾವುದೇ ನಿಕಾಯ ಅಥವಾ ನಿಗಮವನ್ನು,

-ಅಂಥ ಸಹಕಾರಿಯ ಉಪವಿಧಿಯಲ್ಲಿ ನಮೂದಿಸಬಹುದಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಸಹ ಸದಸ್ಯ ಎಂದು ಸೇರಿಸಿಕೊಳ್ಳಬಹುದು:

ಪರಂತು, ಯಾವುದೇ ಸಹಕಾರಿಯ ಸಹ ಸದಸ್ಯರ ಸಂಖ್ಯೆಯು ಅಂಥ ಸಹಕಾರಿಯ ಒಟ್ಟು ಸದಸ್ಯರ ಸಂಖ್ಯೆಯ ಗರಿಷ್ಠ ಶೇಕಡ ಹತ್ತನ್ನು ಮೀರತಕ್ಕದ್ದಲ್ಲ. ಒಂದು ವೇಳೆ ಈಗಾಗಲೇ ಸಹಕಾರಿಯು ತನ್ನ ಒಟ್ಟು ಸದಸ್ಯರ ಸಂಖ್ಯೆಯ ಶೇಕಡ ಹತ್ತಕ್ಕಿಂತ ಹೆಚ್ಚಾಗಿ ಸಹ ಸದಸ್ಯರನ್ನು ಹೊಂದಿದ್ದಲ್ಲಿ, ಅಧಿಕವಾಗಿರುವ ಸಹ ಸದಸ್ಯರನ್ನು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ, 2014 ಜಾರಿ ಬಂದ ದಿನಾಂಕದಿಂದ ಆರು ತಿಂಗಳೊಳಗೆ ಸಾಮಾನ್ಯ ಸದಸ್ಯರನ್ನಾಗಿ ಮಾಡಿಕೊಳ್ಳತಕ್ಕದ್ದು ಅಥವಾ ಸಹ ಸದಸ್ಯತ್ವದಿಂದ ತೆಗೆದುಹಾಕತಕ್ಕದ್ದು.

**xxx** **xxx** **xxx**

**24. ಮಂಡಲಿಯ ರಚನೆ.–** ಪ್ರತಿಯೊಂದು ಸಹಕಾರಿಯ ಮಂಡಲಿಯು ಮುಖ್ಯಕಾರ್ಯನಿರ್ವಾಹಕನನ್ನು ಹೊರತುಪಡಿಸಿ ಹನ್ನೊಂದಕ್ಕಿಂತ ಕಡಿಮೆಯಿಲ್ಲದ, ಆದರೆ ಕೆಳಗೆ ನಿರ್ದಿಷ್ಟಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ ಚುನಾಯಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರಿಯ ಕಾರ್ಯಕ್ಷೇತ್ರವು–

(ಎ) ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹನ್ನೊಂದು ಸದಸ್ಯರು;

(ಬಿ) ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿಮೂರು ಸದಸ್ಯರು;

(ಸಿ) ತಾಲ್ಲೂಕನ್ನು ಮೀರಿದ ಆದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದರೆ, ಹದಿನೈದು ಸದಸ್ಯರು:

ಪರಂತು, ಒಂದು ಜಿಲ್ಲೆಯನ್ನು ಮೀರದ ಕಾರ್ಯಕ್ಷೇತ್ರವನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕಿನ ಸಂಬಂಧದಲ್ಲಿ ಗರಿಷ್ಠ ಸಂಖ್ಯೆಯು ಹದಿನೇಳನ್ನು ಮೀರತಕ್ಕದ್ದಲ್ಲ.

(ಎ) ಜಿಲ್ಲೆಯನ್ನು ಮೀರಿ ವ್ಯಾಪಿಸಿದರೆ, ಹದಿನೇಳು ಸದಸ್ಯರು;

(ಬಿ) ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು ಸದಸ್ಯರು;

(ಸಿ) ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು ಸದಸ್ಯರು:

ಪರಂತು, ಬಿಡಿ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಉಳ್ಳ ಸಹಕಾರಿಯ ಆಡಳಿತ ಮಂಡಲಿಯಲ್ಲಿ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಕ್ಕೆ ಒಂದು ಸ್ಥಾನವನ್ನು, ಮಹಿಳೆಯರಿಗಾಗಿ ಎರಡು ಸ್ಥಾನಗಳನ್ನು ಮತ್ತು ಹಿಂದುಳಿದ ವರ್ಗದವರಿಗೆ ನಿಗಧಿ ಪಡಿಸಿದ ರೀತಿಯಲ್ಲಿ ಎರಡು ಸ್ಥಾನಗಳನ್ನು ಅಂತಹ ವರ್ಗದ ಅಥವಾ ಗುಂಪಿನ ವ್ಯಕ್ತಿಗಳು ಸದಸ್ಯರಾಗಿದ್ದಲ್ಲಿ, ಮೀಸಲಿಡತಕ್ಕದ್ದು:

ಮತ್ತು ಪರಂತು, ಪ್ರತಿಯೊಂದು ಸಹಕಾರಿಯು ಬ್ಯಾಂಕಿಂಗ್, ವ್ಯವಸ್ಥಾಪನೆ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಹಕಾರಿಯು ಕೈಗೊಂಡ ಚಟುವಟಿಕೆಗಳಿಗೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಇತರೆ ಯಾವುದೇ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (ಕೋ–ಆಪ್ಟ್) ಸೇರಿಸಿಕೊಳ್ಳತಕ್ಕದ್ದು. ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು ಅಂತಹ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರಿಯ ಯಾವುದೇ ಚುನಾವಣೆಯಲ್ಲಿ ಮತ ನೀಡುವ ಹಕ್ಕುವುಳ್ಳವರಾಗಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ:

ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಪ್ಪತ್ತೊಂದು ನಿರ್ದೇಶಕರಿಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ.

ಅಲ್ಲದೇ ಪರಂತು, ಒಂದು ಸಹಕಾರಿಯ ಮೂರಕ್ಕೆ ಮೀರದ ಕಾರ್ಯಾನುಗುಣ ನಿರ್ದೇಶಕರು (functional directors) ಸಹ ಅವಶ್ಯವಿದ್ದಲ್ಲಿ ಆಡಳಿತ ಮಂಡಲಿಯ ಸದಸ್ಯರಾಗಿರತಕ್ಕದ್ದು, ಹಾಗೂ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಒಟ್ಟು ನಿರ್ದೇಶಕರ ಸಂಖ್ಯೆಯನ್ನು ಎಣಿಸುವಾಗ ಅಂತಹ ಕಾರ್ಯಾನುಗುಣ ನಿರ್ದೇಶಕರನ್ನು ಹೊರತುಪಡಿಸತಕ್ಕದ್ದು.

**xxx** **xxx** **xxx**

**25. ನಿರ್ದೇಶಕನಾಗಿ ಚುನಾಯಿತನಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ.- xxx**

(2) ನಿರ್ದೇಶಕರುಗಳೆಲ್ಲರೂ, ಸಹಕಾರಿಯ ನಿರ್ದೇಶಕರ ಹುದ್ದೆಯ ಪದಾವಧಿಯಲ್ಲಿ,-

(ಎ) ಮಂಡಲಿಯ ನಿರ್ದೇಶಕರ ಪದಾವಧಿ ಮುಕ್ತಾಯವಾಗುವುದಕ್ಕೆ ಮೊದಲು ಚುನಾವಣೆಗಳನ್ನು ನಡೆಸಲು ಸಹಕಾರ ಚುನಾವಣಾ ಆಯೋಗಕ್ಕೆ ಅಗತ್ಯ ನೆರವು ನೀಡದಿದ್ದರೆ;

(ಎ-1) ಸಹಕಾರ ವರ್ಷ ಮುಕ್ತಾಯವಾದ ಆರು ತಿಂಗಳೊಳಗೆ 34ನೇ ಪ್ರಕರಣದಡಿ ರಿಜಿಸ್ಟ್ರಾರನಿಗೆ ಹಾಗೂ ಸಂಯುಕ್ತ ಸಹಕಾರಿಗೆ ವಿಧ್ಯುಕ್ತ ವರದಿಗಳನ್ನು (ರಿಟರ್ನ್ಸ್) ಮತ್ತು ಮಾಹಿತಿಯನ್ನು ಸಲ್ಲಿಸದಿದ್ದರೆ; ಅಥವಾ

(ಎ-2) ಗಂಭೀರ ಹಣಕಾಸು ಅಕ್ರಮಗಳನ್ನು ಅಥವಾ ವಂಚನೆಯನ್ನು ಎಸಗಿರುವುದು ಕಂಡು ಬಂದರೆ; ಅಥವಾ

(ಬಿ)ಪ್ರತಿವರ್ಷ ಸೆಪ್ಟಂಬರ್ ತಿಂಗಳ ಇಪ್ಪತ್ತೈದರೊಳಗೆ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸದಿದ್ದರೆ ಅಥವಾ 30ನೇ ಪ್ರಕರಣದಲ್ಲಿ ಗೊತ್ತುಪಡಿಸಲಾದ ಸಮಯದೊಳಗೆ ನಡೆಸಲು ಕೋರಲಾದ ಸಾಮಾನ್ಯ ನಿಕಾಯದ ಸಭೆಯನ್ನು ನಡೆಸದಿದ್ದರೆ; ಅಥವಾ

(ಸಿ) ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಲೆಕ್ಕಪರಿಶೋಧಕರ ವರದಿಯೊಂದಿಗೆ ಹಿಂದಿನ ಸಹಕಾರ ವರ್ಷದ ಲೆಕ್ಕಪರಿಶೋಧನೆ ಮಾಡಲಾದ ಲೆಕ್ಕ ಪತ್ರಗಳನ್ನು ಮಂಡಿಸದಿದ್ದರೆ, - ಅನರ್ಹತೆಗೆ ಗುರಿಯಾಗತಕ್ಕದ್ದು ಮತ್ತು ಹಾಗೆ ಅನರ್ಹತೆಗೆ ಗುರಿಯಾದ ದಿನಾಂಕದಿಂದ ಗರಿಷ್ಠ ಐದು ವರ್ಷಗಳ ಅವಧಿಯವರೆಗೆ ಒಂದು ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಮತ್ತು ಆ ಸಹಕಾರಿಯ ಅಥವಾ ಇತರ ಯಾವುದೇ ಸಹಕಾರಿಯ ನಿರ್ದೇಶಕರಾಗಿ ಮುಂದುವರಿಯಲೂ ಸಹ ಅನರ್ಹರಾಗಿರತಕ್ಕದ್ದು.

**xxx** **xxx** **xxx**

**48. ರಿಜಿಸ್ಟ್ರಾರನಿಂದ ಸಮಾಪನ.- xxx**

(5) ರಿಜಿಸ್ಟ್ರಾರನು, ಸಹಕಾರಿಯು ಯಾವುದೇ ಉತ್ತರ ನೀಡಿದ್ದಲ್ಲಿ, ಅದನ್ನು ಪರಿಗಣಿಸಿದ ತರುವಾಯ,-

(i) ಸಹಕಾರಿಗೆ ಯಾವುದೇ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇಲ್ಲವೆಂದು ಮನವರಿಕೆಯಾದರೆ, ಸಹಕಾರಿಯನ್ನು ಸಮಾಪನಗೊಳಿಸಲಾಗಿದೆ ಎಂದು ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಕೂಡಲೇ ಅಂಥ ಸಹಕಾರಿಯ ನೋಂದಣಿಯನ್ನು ರದ್ದುಪಡಿಸತಕ್ಕದ್ದು; ಅಥವಾ

(ii) ಸಹಕಾರಿಗೆ ಆಸ್ತಿಗಳು ಅಥವಾ ಹೊಣೆಗಾರಿಕೆಗಳು ಇವೆಯೆಂದು ಮನವರಿಕೆಯಾದರೆ, ಅಂಥ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನಿಂದ, ಸಾಮಾನ್ಯ ಸಭೆಯು ಸಹಕಾರಿಯನ್ನು ಸಮಾಪನಗೊಳಿಸುವ ನಿರ್ಣಯವನ್ನು ಅಂಗೀಕರಿಸಿದ ತರುವಾಯ ಒಬ್ಬ ಸಮಾಪಕನನ್ನು ನೇಮಕ

ಮಾಡಿಲ್ಲವೆಂಬ ವರದಿಯನ್ನು ಸ್ವೀಕರಿಸಿದ ಮೇಲೆ ಸಮಾಪಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಸಹಕಾರಿ ಮತ್ತು ಸಂಯುಕ್ತ ಸಹಕಾರಿಗೆ ತಿಳಿಸತಕ್ಕದ್ದು.

**XXX XXX XXX**

**49. ಸಮಾಪಕನ ಕರ್ತವ್ಯಗಳು.- XXX XXX XXX**

(3) ಸಮಾಪಕನು,- **XXX XXX XXX**

(ಸಿ) ಸಹಕಾರಿಯ ಹಣದ ಸಲುವಾಗಿ ಒಂದು ಟ್ರಸ್ಟ್ ಖಾತೆಯನ್ನು ತೆರೆಯತಕ್ಕದ್ದು ಮತ್ತು ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು;

**XXX XXX XXX**

**53. ಸಂಯುಕ್ತ ಸಹಕಾರಿಯ ರಚನೆ, ಪ್ರಕಾರ್ಯಗಳು ಹಾಗೂ ನಿರ್ವಹಣೆ.- XXX**

(7) ಸಂಯುಕ್ತ ಸಹಕಾರಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪ ವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ , 1000-ಪ್ರತಿಗಳು 14ನೇ ಜುಲೈ, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TENTH SESSION**

# THE KARNATAKA SOUHARDA SAHAKARI (AMENDMENT) BILL, 2016

**(L.A. Bill No. 26 of 2016)**

A Bill further to amend the Karnataka Souharda Sahakari Act, 1997.

Whereas, it is expedient further to amend the Karnataka Souharda Sahakari Act, 1997 (Karnataka Act 17 of 2000);

Be it enacted by the Karnataka State legislature in the sixty seventh year of the republic of India, as follows:-

**1. Short title and Commencement.-** (1) This Act may be called the Karnataka Souharda Sahakari (Amendment) Act, 2016.

(2) It shall come into force on such date as the State Government may by notification in the Official Gazette appoint.

**2. Amendment of section 15.-** In the Karnataka Souharda Sahakari Act, 1997 (Karnataka Act 17 of 2000) (hereinafter referred to as the principal Act) in section 15, in sub-section (1), after the proviso, the following shall be inserted, namely:-

"Provided further that, subject to such rules as may be prescribed, no co-operative shall promote or invest in subsidiary organizations without prior approval of the registrar."

**3. Amendment of section 18.-** In section 18 of the principal Act, for clause (a), the following shall be substituted, namely:-

"(a) in any of the securities approved by the Government; or"

**4. Amendment of section 21A.-** In section 21A of the principal Act, sub-section (1), after clause(b), the following shall be inserted, namely:-

"(c) or a recognized self-help group which do not have Government aid" shall be inserted.

**5. Amendment of section 21B.-** In section 21B of the principal Act, in sub-section (1), for the proviso, the following shall be substituted, namely:-

"Provided that other than employees co-operatives number of associate

members shall not exceed fifteen percent of the total members."

**6. Amendment of section 24.-** In section 24 of the Principal Act,-

(i) for the word "eleven" the word "thirteen" shall be substituted;

(ii) for sub-section (1), the following shall be substituted, namely:-

"(1) in case of a primary co-operative and a secondary co-operative whose area of operation extends to,-

(a) a part of taluk, thirteen members;

(b) whole of taluk, fifteen members;

(c) beyond a taluk, seventeen members;

(d) in the case of a union co-operative, nineteen members

(e) in the case of an apex co-operative including the federal co-operative, twenty one members.

Provided that one seat shall be reserved in favour of members belonging to the scheduled castes and one seat for the members belonging to the scheduled tribes, two seats shall be reserved in favour of women members and two seats shall be reserved in favour of members belonging to backward classes as may be notified by the State Government, on the board of every co-operative consisting of individuals as members and having members from such class or category of persons.

Provided further that every co-operative shall co-opt persons having experience in the field of banking, management, finance or specialization in any other field relating to the objects and activities undertaken by the co-operative, as members of the board of such co-operative and such co-opted members shall not have the right to vote in any election of the co-operative in their capacity as such member or to be eligible to be elected as office bearers of the board.

Provided also that the number of such co-opted members shall not exceed two in addition to twenty one directors specified in sub-section (1).

Provided also that not more than three functional directors if necessary of a cooperative shall also be the members of the board and such members shall be excluded for the purpose of counting the total number of directors specified in the sub-section (1)."

**7. Amendment of section 25.-** In section 25 of the principal Act, in sub-section (2) after clause (c) the following shall be inserted, namely:-

"(d) have violated the order or direction of the Federal Cooperative or violated any order of quasi-judicial authority or court;

(e) have opened branches without prior approval of the Federal Cooperative."

**8. Insertion of new section 25A.-** After section 25 of the principal Act, the following shall be inserted, namely:-

**"25A. Motion of no-confidence against office-bearer:** (1) A motion of no-confidence against an office bearer may be moved only after two years

of his assumption of office. In case, the motion of no-confidence is once defeated, a fresh motion shall not be introduced within one year thereafter. No motion of no-confidence shall be moved unless there is a request from not less than one-third of the elected members of the Board of a co-operative concerned.

(2) An office bearer of a co-operative shall be deemed to have vacated his office forthwith, if a resolution expressing want of confidence in him is passed by a majority of two third of the total number of elected directors of a co-operative at a meeting specially convened for the purpose.

(3) The procedure for no-confidence motion shall be such as may be prescribed."

**9. Insertion of new section 38B.-** After section 38A of the Principal Act, the following shall be inserted, namely:-

"**38B. Power to seize books and property.-** If any officer or person conducting audit under section 33, inquiry under section 35, or inspection, has reason to believe that any books or other property of the co-operative have tampered with or are likely to be tampered with, if left with the co-operative with a view to eliminate or efface or change or manipulate any evidence which may be deemed necessary by such officer or person in connection with the proof of any defect or irregularities noticed by him during the course of audit, inquiry or inspection, the Registrar by issuing a special order empower such officer to seize and impound such books or property in such manner and for such period as may be prescribed."

**10. Amendment of section 48.-** In section 48 of the Principal Act, in sub-section (2), in the hanging paragraph, after the words "he may suo moto" the words "or on the recommendation of the federal co-operative." shall be inserted.

**11. Amendment of section 49.-** In section 49 of the Principal Act, in sub-section (1) after the words "creditor of co-operative" the following shall be inserted, namely:-

"the Liquidator, as so appointed, shall take the charge and enlist the asset and liabilities of the co-operative and obtain approval for the priority list from the Registrar and shall commence the liquidation process after such approval only."

**12. Insertion of new section 52A.-** After section 52 of the Principal Act, the following shall be inserted, namely:-

"**52A Transfer of surplus funds, deposits and assets.-** After completion of the liquidation process, if any surplus funds, deposits, movable or immovable assets remains, such funds or assets shall be transferred to the souharda co-operatives development fund with the approval of the Registrar. The establishment, custody, management and utilisation of such fund shall be such as may be prescribed."

**13. Insertion of new section 69A.-** After section 69 of the Principal Act, the following shall be inserted, namely:-

"**69A. Complaint regarding offences**:- No complaint regarding offences under section 68 shall be instituted unless it is approved by the Registrar.

Provided that no approval of the Registrar shall be necessary for filing criminal complaint against the delinquents for alleged misappropriation or embezzlement of funds of a co-operative detected during course of audit, enquiry or inspection or in the normal course of business of a co-operative.

**69B. Protection of action taken in good faith.**- No suit, prosecution or other legal proceedings shall lie against the Registrar or any person subordinate to him or acting on his authority or the Director of co-operative Audit or any other person subordinate to him acting on his authority or against the new Board of the co-operative or the administrator appointed under section 38 or the Special Officer appointed under section 38A in respect of anything done in good faith or purporting to have been done under this Act."

## STATEMENT OF OBJECTS AND REASONS

It is considered necessary to amend the Karnataka Souharda Sahakari Act, 1997 (Karnataka Act 17 of 2000) to,-

(i) increase the number of associate members from present 10% to 15%;

(ii) provide separate reservations for the Scheduled Castes and the Scheduled Tribes members in the management of the souharda sahakari;

(iii) make provision for no confidence motion against the office-bearers in souharda co-operatives;

(iv) make provision for power to seize books and property of the co-operative by the officer conducting audit, enquiry or inspection; and

(v) provide for transfer surplus funds on liquidation to souharda co-operative development fund.

Hence the Bill.

## FINANCIAL MEMORANDUM

There is no extra expenditure involved in the proposed Legislative measure.

# MEMORANDUM REGARDING DELEGATED LEGISLATION

| | |
|---|---|
| Clause-2 | The proviso proposed to be inserted in sub-section (1) of section 15, empowers the State Government to prescribe by rules subject to which a co-operative shall promote or invest in subsidiary organization with prior approval of Registrar. |
| Clause-8 | Section 25-A proposed to be inserted empowers the State Government to prescribe by rules the procedure for no confidence motion. |
| Clause-9 | Section 38-B proposed to be inserted empowers the State Government to prescribe by rules the manner and period for which books or property of the co-operative can be seized and impounded. |
| Clause-12 | Section 52-A proposed to be inserted empowers the State Government to prescribe by rules the establishment, custody, management and utilization of the souharda co-operatives development fund. |

The Proposed delegation of legislative power is normal in character.

**H.S. Mahadeva Prasad**
Minister for Co-operation & Sugar

**S.Murthy**
Secretary (I/C)
Karnataka Legislative Assembly

## ANNEXURE

## Extract from the Karnataka Souharda Sahakari Act, 1997

## (Karnataka Act 17 of 2000)

XX XX XX

**15. Promotion of subsidiary organisations.-** (1) Any Co-operative may, by a resolution passed at its general meeting by a majority of members present with a right to vote, promote one or more subsidiary organisations for the furtherance of its objectives and such organisations may be registered under any law for the time being in force.

Provided that, a Co-operative Bank shall not promote a subsidiary, nor shall a Co-operative promote a subsidiary whose by-laws permit the carrying on of banking business, without the prior permission of the Reserve Bank in writing.

XX XX XX

**18. Investment of Funds.-** Such of its funds as are not immediately required for use by a Co-operative, may be invested or deposited outside its business, namely:-

(a) in any of the securities specified in section 20 of the Indian Trusts Act, 1882 (Central Act II of 1882); or

XX XX XX

**21A - Nominal members.-** (1) A cooperative may, in its interest, admit,-

(a) any person;

(b) any firm, company, cooperative society or cooperative or anybody or corporation constituted by or under any law for the time being in force;

XX XX XX

**21B- Associate membership.-** (1) A Co-operative may admit,- XX XX XX

b) any firm, company, Co-operative society or any body or corporation constituted by or under any law for the time being inforce
- as an associate member for a specific purpose as specified in its byelaws;

Provided that no Co-operative shall have as its associate members more than ten percent of total members. In case if a Co-operative already has associate members more than ten percent of its total membership, the

excess associate members shall be either converted as an ordinary member of Co-operative or removed from associate membership of Co-operative within six months from the date of coming in to force of the Karnataka Souhardha Sahakari (Amendment) Act, 2014.

XX XX XX

**24.Constitution of the Board.-** The Board of every cooperative shall consist of not less than eleven but not exceeding the number of elected members specified below excluding the chief executive namely:-

(1) in case of a primary cooperative and a secondary cooperative whose area of operation extends to,-

(a) a part of taluk, eleven members;

(b) whole of taluk, thirteen members;

(c) beyond a taluk but not beyond a district, fifteen members;

Provided that in case of an urban cooperative bank having an area of operation not beyond a district, the maximum number shall not exceed seventeen members.

(a) beyond a district, seventeen members

(b) in the case of a union cooperative, nineteen members

(c) in the case of an apex cooperative including the federal cooperative, twenty one members.

Provided that one seat shall be reserved in favour of members belonging to scheduled castes or the scheduled tribes, two seats shall be reserved in favour of women members and two seats shall be reserved in favour of members belonging to backward classes in such manner on the board of every co-operative consisting of individuals as members and having members from such class or category of persons.

Provided further, that every cooperative shall co-opt persons having experience in the field of banking, management, finance or specialization in any other field relating to the objects and activities undertaken by the cooperative, as members of the board of such cooperative and such co-opted members shall not have the right to vote in any election of the cooperative in their capacity as such member or to be eligible to be elected as office bearers of the board.

Provided also that the number of such co-opted members shall not exceed two in addition to twenty one directors specified in sub-section (1).

Provided also that not more than three functional directors if necessary of a cooperative shall also be the members of the board and such members shall be excluded for the purpose of counting the total number of directors specified in the sub-section (1).

XX XX XX

**25. Disqualification for being elected or continued as director.-** XX XX

(2) All the directors shall incur disqualification for being elected as directors in a Co-operative for a maximum period of five years from the date of incurring such disqualification and shall also be disqualified to continue as directors of that Co-operative or any other Co-operative, if during the term of office as directors of a Co-operative they,-

(a) have not rendered necessary assistance to the cooperative election commission for conducting election to the board before the expiry of its term within the stipulated time; or

(a-1) have not submitted returns and information to the Registrar and the federal cooperative as per section 34 within a period of six months from the close of the cooperative year; or

(a-2) have committed serious financial irregularities or frauds which have been detected; or

(b) have not conducted the annual general meeting within the twenty fifth day of September every year or requisitioned meeting of the general body within the time stipulated in section 30; or

(c) have not placed the audited accounts for the preceding cooperative year along with the report of the auditor before the annual general meeting.

XX XX XX

**48 Winding up by the Registrar.-** XX XX XX

(5) If the Registrar after considering the reply, if any, is satisfied.-

(i) that the Co-operative has no assets and liabilities, he shall issue a certificate that the Co-operative has been wound up and cancel the registration of such Co-operative forthwith; or

(ii) that the Co-operative has assets and liabilities, he shall on receipt of a report from the Chief Executive of such Co-operative that a liquidator has not been appointed by the general body after a resolution to wind up has been passed, appoint a liquidator and communicate the same to the Co-operative and the Federal Co-operative.

XX XX XX

**49. Duties of Liquidator.-** XX XX XX

XX XX XX

(3) The liquidator shall,- XX XX XX

(c) open and maintain a trust account for the money of the Co-operative;

XX XX XX

**53. Constitution, functions and management of Federal Co-operative.**-XX XX XX

(7) The Federal Co-operative shall perform the following functions, namely:-

(a) promote and organise Co-operative and for this purpose frame model bye-laws and issue guidelines for framing various policies for Co-operatives in accordance with co-operative principles;

XX XX XX

Government Press, Vikasa Soudha Unit, Bengaluru 14th July 2016 P7, W.D., Copies 1000